ಆ) 1995-96ನೇ ಸಾಲಿನಲ್ಲಿ ಅರೆಯದೇ ಉಳಿದಿರುವ ಕಬ್ಬಿನ ಪ್ರಮಾಣವೆಷ್ಟು ಮತ್ತು ಈ ಉಳಿಕೆ ಕಬ್ಬನ್ನು ಅರೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) ಇರುವುದಿಲ್ಲ.

ಆ) ದಿನಾಂಕ: 15-6-96ಕ್ಕೆ ಸುಮಾರು 10 ಲಕ್ಷ ಟನ್ ಕಬ್ಬು ಉಳಿದಿರುವ ಅಂದಾಜು ಮಾಡಿದೆ. ಇನ್ನುಳಿಕೆ ಇರುವ ಕಬ್ಬನ್ನು ಬರುವ ಹಂಗಾಮಿನ ಆರಂಭದಲ್ಲಿ ಎತ್ತುವಳಿ ಮಾಡಿ ಅರೆಯುವ ವ್ಯವಸ್ಥೆ ಕಲ್ಪಿಸುವ ಯೋಜನೆಯಿದೆ.

ವಿಷಯ:- ನಗರ ಯೋಜನೆ ಹಾಗೂ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 191 (459)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 74ನೇ ಸಂವಿಧಾನ ತಿದ್ದುಪಡಿ ಪ್ರಕಾರ ನಗರ ಯೋಜನೆ ಹಾಗೂ ಅಭಿವೃದ್ಧಿಯ ಹೊಣೆಗೆ ನಗರಸಭೆ:ಪುರಸಭೆಗಳಿಗೆ ಸೇರಿದ ವಿಷಯವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

2) ಈ ಅಧಿಕಾರವನ್ನು ಸಂಬಂಧಿಸಿದ ಪುರಸಭೆ: ನಗರಸಭೆಗಳಿಗೆ ವರ್ಗಾಯಿಸಲು ಇರುವ ತೊಂದರೆಗಳೇನು?

3) ಸಂವಿಧಾನಕ್ಕೆ ವಿರೋಧವಾಗಿ ಕಾರ್ಯ ನಿರ್ವಹಿಸುತ್ತಿರುವ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹಾಗೂ ಯೋಜನಾ ಮಂಡಳಿಗಳನ್ನು ಕೂಡಲೇ ಸ್ಥಗಿತಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್ (ಪೌರಾಡಳಿತ ಸಚಿವರು):-

1) ಹೌದು. ಆದರೆ ಇದು ಕಟ್ಟಾಜ್ಞೆಯಲ್ಲ.

2) ಈ ಅಧಿಕಾರವನ್ನು ಈಗಿರುವ ನಗರ ಯೋಜನಾ ಪ್ರಾಧಿಕಾರವೇ ನಿರ್ವಹಿಸಲು ಸಂವಿಧಾನ 74ನೇ ತಿದ್ದುಪಡಿ ಅಡ್ಡಿ ಬರುವುದಿಲ್ಲ.

3) ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಯೋಜನಾ ಮಂಡಳಿಗಳು ಸಂವಿಧಾನಕ್ಕೆ ವಿರೋಧವಾಗಿ ಕಾರ್ಯ ನಿರ್ವಹಿಸುತ್ತಿಲ್ಲ.

ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 192 (460)